


## ಬೈಕ್ ರೇಸಿಂಗ್ ಥ್ರಿಲ್

ಜೀವನ ಒತ್ತೆ ಇಟ್ಟು ರೇಸಿಂಗ್ ಆಡುವ ಬಗ್ಗೆ ಓದಿದರೆ ಮೈನಡುಗುತ್ತದೆ. ಇರ್ಷದ್ ಎಂ. ವೇಣೂರು ಅವರು ಬೈಕ್ ರೇಸಿಂಗ್‌ನಲ್ಲಿ ಸಿಗುವ ಥ್ರಿಲ್‌ಅನ್ನು ಕುರಿತು ಜುಲೈ 7ರ 'ಸುಧಾ' ಸಂಚಿಕೆಯ ಮುಖಪುಟ ಲೇಖನದಲ್ಲಿ ಸಾಕಷ್ಟು ಮಾಹಿತಿ ನೀಡಿದ್ದಾರೆ.

–ಪಿ.ಎ.ಸುಧೀಂದ್ರ, ಬೆಂಗಳೂರು

## ಚಳಿಗಾಲದ ಊಟಿ

ಅಶೋಕ ಉಚ್ಚಂಗಿಯವರು ಬೇಸಿಗೆಯ ದಿನಗಳಲ್ಲೂ ತಂಪು ಹವೆ ಹೊಂದಿರುವ ಊಟಿಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

–ಪಿ.ಎಸ್. ಶ್ರೀವತ್ಸ, ಬೆಂಗಳೂರು

## ಅನನ್ಯ ಮಾದರಿ

ಹಿರಿಯ ಕಲಾವಿದ ಮರಿಶಾಮಾಚಾರ್ ಅವರ ವಿದ್ಯಾರ್ಥಿ ನಾನು. ಕಲಾ ಪರೀಕ್ಷೆಗಳಿಗೂ, ಸ್ಪರ್ಧೆಗಳಿಗೂ ನಮ್ಮನ್ನು ಅವರು ಅನುವುಗೊಳಿಸುತ್ತಿದ್ದ ರೀತಿ ಅನನ್ಯ. ಮರಿಯವರಿಗೆ ಅರವತ್ತರ ಅಭಿನಂದನೆ ಸಂದರ್ಭದಲ್ಲಿ ವಾಸುದೇವ್‌ರಂತಹ ಹಿರಿಯ ಕಲಾವಿದರು ಬರೆದದ್ದು 'ಸುಧಾ' ಪತ್ರಿಕೆಯ ಹೆಗ್ಗಳಿಕೆಯಾಗಿದೆ.

–ಎಂ.ಎಸ್. ಲೀಲಾವತಿ, ಬೆಂಗಳೂರು

## ಎತ್ತರಕ್ಕೇರಿದ ಎತ್ತಯ್ಯ

'ಕಬಿನಿ ತೀರದ ನಾವಿಕ ಎತ್ತಯ್ಯ' ಕುರಿತು ಪಿ.ಪಿ. ಬಾಬುರಾಜ್ ಲೇಖನ ಓದಿದಾಗ ಕಣ್ಣುಗಳಲ್ಲಿ ನೀರು ಪಸರಿಸಿತು. ಎತ್ತಯ್ಯ ತನ್ನ ಸಂಸಾರದಲ್ಲಿ ನಡೆದು ಹೋದ ಕಹಿ ಪ್ರಸಂಗವನ್ನು ಮರೆತು ದಿಟ್ಟತನದಿಂದ ಬದುಕನ್ನು ಎದುರಿಸುತ್ತಿದ್ದಾನೆ ಎಂಬುದು ನಿಜಕ್ಕೂ ಅದ್ಭುತ.

–ಎ.ಕೆ. ಪಟ್ಟಾಭಿ, ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು/
ತರಂಗಿಣಿ, ತುಮಕೂರು/ ಅಶೋಕ ಐರಣಿ, ದಾವಣಗೆರೆ/
ವೈ.ಎಂ.ಚಂದ್ರಶೇಖರ್, ಸಿದ್ದಾಪುರ

## ಮುದ ನೀಡಿದ ಬರಹ

'ಕ್ರೋಸಿನ್ ಅಲ್ಲ, ಕೆರೋಸಿನ್' ಡಾ. ವೀಣಾ ಭಾರತಿ ಅವರ ವೈದ್ಯಕೀಯ ಅನುಭವಗಳ ಕಥಾನಕ ಓದಲು ಬಲು ಮುದ ನೀಡಿತು.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ/ ರಾಜಶೇಖರಗೌಡ, ಕೊಟ್ಟೂರು

## ಅನುಭವ ಕಥನ

'ಪುಟ್ಟೀರಕ್ಕಜ್ಜಿ ದೆವ್ವನ್ನ ಬೇತಾಳಪ್ಪ ನುಂಗಿತ್ತಾ...' ಎಸ್.ಜಿ. ತುಂಗರೇಣುಕರ ಕಥೆ ಕಲ್ಪನೆಯಲ್ಲ, ಸ್ವಂತ ಅನುಭವ ಎನ್ನುವಂತಿತ್ತು. ಓದಿದ ಮೇಲೆಯೂ ಕಾಡುವ ಕಥೆ. ಬರಹದ ಶೈಲಿ ಚಂದ ಇತ್ತು.

–ಅ.ನಾ.ಪ್ರಹ್ಲಾದರಾವ್, ವಿಜಯ ಪ್ರಸಾದ್, ಬೆಂಗಳೂರು/
ಎಚ್. ಆನಂದ್‌ಕುಮಾರ್, ಚಿತ್ರದುರ್ಗ

## ಇನ್ನೂ ಒಂದು ಉತ್ತರ

ಕಾಮನ ಬಿಲ್ಲು ವಿಭಾಗದಲ್ಲಿನ ಸಂಖ್ಯಾ ಸ್ವಾರಸ್ಯ ಪ್ರಶ್ನೆ: 31,30,31,31... ಈ ನಂಬರಿನ ಮಾದರಿಯನ್ನು ನೋಡಿ ಮುಂದಿನ ಸಂಖ್ಯೆ ಯಾವುದು? ಎಂಬ ಪ್ರಶ್ನೆಗೆ ಉತ್ತರ 28 ಎಂದು ತಿಳಿಸಿದ್ದೀರಿ. ಅದಕ್ಕೆ ಇನ್ನೂ ಒಂದು ಉತ್ತರವಿದೆ. ಅದು 30. ಮೇ ತಿಂಗಳಿನಿಂದ ಲೆಕ್ಕ ತೆಗೆದುಕೊಂಡರೆ ಸೆಪ್ಟೆಂಬರ್ 30 ಕೂಡ ಇದಕ್ಕೆ ಉತ್ತರ.

–ವಿದ್ಯಾಧರ ಎ. ಅರಕೆರೆ

## ವ್ಯಾಕರಣದ ಶಿಸ್ತಿಗೆ ಗಮನ

ಸುಧಾ 'ಪದಬಂಧ'ದಲ್ಲಿ ಅಲ್ಪಪ್ರಾಣ ಮಹಾಪ್ರಾಣದಂತಹ ವ್ಯಾಕರಣದ ಶಿಸ್ತಿನ ಬಗ್ಗೆ ಇನ್ನೂ ಹೆಚ್ಚಿನ ಗಮನ ಕೊಡಬೇಕು.

–ಶ್ರೀನಾಥ ಕೊನೇಟಿ, ಬೆಂಗಳೂರು

## ಅನಾದಿ ಕಾಲದಿಂದ ಗ್ರಹಣ!

ತನುಮನದಲ್ಲಿ ವೈ–ಚಾರಿಯವರು ವಿದೇಶಿಯರು ಗ್ರಹಣವನ್ನು ಸಿನಿಮಾ ನೋಡಿದಂತೆ ನೋಡುತ್ತಾರೆ ಎಂದು ಬರೆದಿದ್ದಾರೆ. ಬಹುಶಃ ಈಗಿನ ಪಾಶ್ಚಾತ್ಯ ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೆ ಹೇಳಿರಬಹುದು. ಆದರೆ ಗ್ರಹಣದ ಆಚರಣೆ ಅನಾದಿ ಕಾಲದಿಂದಲೂ ಎಲ್ಲ ನಾಗರಿಕತೆಗಳಲ್ಲೂ ಕಂಡು ಬರುತ್ತದೆ.

–ಕೆ. ಪ್ರಕಾಶ್, ಚಿಕ್ಕಜೋಗಿಹಳ್ಳಿ

